ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶಿಗ್ಗಾಂವ.

ಸಿಸಿ.ನಂ. 247-2012

ಪಿಡಬ್ಲ್ಯು- 1 ಸಿಡಬ್ಲ್ಯು- 1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕ್ಷಿತೀಜ ನಾಗನಾಥರಾವ್ ಅಸನೂಲಕರ್ |
| ವಯಸ್ಸು | ಃ | 35 ವರ್ಷಗಳು |
| ಉದ್ಯೋಗ | ಃ | ವ್ಯಾಪಾರ |
| ವಾಸ ಸ್ಥಳ | ಃ | ಮುಂಬೈ. |

*ಅಪರಾಧಿಕಾ ಪ್ರಕ್ರಿಯ ಸಂಹಿತೆಯ ಕಲಂ 299ರ ಕೆಳಗೆ ದಾಖಲು ಮಾಡಿಕೊಂಡ ಸಾಕ್ಷಿಯ ವಿಚಾರಣೆ*

ಮುಖ್ಯ ವಿಚಾರಣೆ ಃ- ಶ್ರೀ ಎಪಿಪಿಯವರಿಂದ

ನನಗೆ ಚಾಸಾ-6 ರವರು ಪರಿಚಯ ಇರುತ್ತಾರೆ. 1 ಮತ್ತು 2ನೇ ಆರೋಪಿತರನ್ನು ನೋಡಿದ್ದೇನೆ.

ನಾನು 2005 ರಿಂದ 2010 ರವರೆಗೆ ಗ್ಲ್ಯಾಸ್ಕೊ ಸ್ಮಿತ್ ಕ್ಲೆಂ ಫಾರ್ಮಾಸಿಟಿಸಿಕಲ್ ಲಿಮಿಟೆಡ್ ಕಂಪನಿಯಲ್ಲಿ ವೆಸ್ಟರ್ಘೋನ್ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ. ದಿಃ 31-03-2009 ರಲ್ಲಿ ಬೆಂಗಳೂರಿನಿಂದ ಒಬ್ಬ ವ್ಯಕ್ತಿ ನನಗೆ ಕರೆ ಮಾಡಿ ಹುಬ್ಬಳ್ಳಿಯ ಆಸುಪಾಸಿನಲ್ಲಿರುವ ಕೆಲವು ವ್ಯಕ್ತಿಗಳು ನಮ್ಮ ಕಂಪನಿಯ ಮತ್ತು ಇನ್ನಿತರೇ ಕಂಪನಿಯ ವಸ್ತುಗಳನ್ನು ನಕಲು ತಯಾರು ಮಾಡಿ ಅದನ್ನು ಸರಬರಾಜು ಮಾಡಿ ವ್ಯಾಪಾರ ಮಾಡುತ್ತಿರುವ ಕುರಿತು ಮಾಹಿತಿಯನ್ನು ತಿಳಿಸಿದರು. ಆ ರೀತಿ ನಕಲು ತಯಾರಾದ ಪದಾರ್ಥಗಳಿಂದ ಆರೋಗ್ಯಕ್ಕೆ ಹಾನಿಕಾರಕವಾಗುವುದರಿಂದ ಚಾಸಾ-6ರವರ ಜೊತೆ ನಾನು ಹುಬ್ಬಳ್ಳಿಗೆ ಬೇಟಿ ನೀಡಿ ತನಿಖೆ ಮಾಡಿದಾಗ ತಡಸ ಪೋ.ಠಾಣಾ ಆಸುಪಾಸಿನಲ್ಲಿ ಕೆಲವೊಂದು ವ್ಯಕ್ತಿಗಳು ನಮ್ಮ ಕಂಪನಿಯ ಮತ್ತು ಇತರೇ ಕಂಪನಿಯಲ್ಲಿ ತಯಾರಾಗುವಂತಹ ವಸ್ತುಗಳಾದಂತಹ ಆಯೋಡೆಕ್ಸ್, ಝಂಡುಬಾಂಬ್, ಮೆಂಥೋಪ್ಲೆಸ್, ಸರ್ಫ್‌ಎಕ್ಸೆಲ್, ಏರಿಯಲ್, ಟೈಡ್ ನಂತಹ ನಕಲಿ ಮಾಲುಗಳನ್ನು ಮಾರಾಟ ಮಾಡುತ್ತಿರುವ ಕುರಿತು ತಿಳಿದು ಬಂದಿದ್ದರಿಂದ, ದಿಃ 03-04-2009 ರಂದು ಬೆಳಿಗ್ಗೆ ತಡಸ ಬಸ ನಿಲ್ದಾಣಕ್ಕೆ ನಾನು ಮತ್ತು ಚಾಸಾ-6ರವರು ಬಂದಿದ್ದೇವು.

ಅದೇ ದಿನ ಮಧ್ಯಾಹ್ನ ಸುಮಾರು 2-45 ಗಂಟೆಗೆ ಇಬ್ಬರು ವ್ಯಕ್ತಿಗಳು ತಡಸ ಬಸ್ ನಿಲ್ದಾಣದ ಬಳಿ ಎರಡು ದೊಡ್ಡ ಬಿಳಿ ಚೀಲವನ್ನು ಇಟ್ಟುಕೊಂಡಿದ್ದು ನೋಡಿ ಸಂಶಯಪಟ್ಟು ಅವರನ್ನು ವಿಚಾರಿಸಿದಾಗ ಅವರು ಮಾಲನ್ನು ತೆಗೆದುಕೊಂಡು ಹೋಗುತ್ತಿರುವ ಕುರಿತು ತಿಳಿಸಿದ್ದು ಅವರ ಕೈಯಲ್ಲಿದ್ದ ಬ್ಯಾಗನ್ನು ನಾವು ಕಂಪನಿಯವರೇ ಎಂದು ನಾನು ಮತ್ತು ಚಾಸಾ-6 ನೋಡಿ ಪರಿಶೀಲಿಸಿದಾಗ

ಆಯೋಡೆಕ್ಸ್, ಝುಂಡುಬಾಂಬ್, ಮೆಂಥೊಪ್ಲೆಸ್, ಸರ್ಫ್ಎಕ್ಸೆಲ್, ಏರಿಯಲ್, ಟೈಡ್ ಎಲ್ಲ ವಸ್ತುಗಳು ನಕಲಿ ಮಾಲು ಎಂದು ತಿಳಿದು ಬಂದು ಅವರ ಜೊತೆಯಲ್ಲಿ ಚಾಸಾ-6 ರವನ್ನು ಬಿಟ್ಟು ನಾನು ತಡಸ ಪೋ.ಠಾಣೆಗೆ ಹೋಗಿ ನಮ್ಮ ಕಂಪನಿಯ ಟ್ರೇಡ್ ಮಾರ್ಕ ಮತ್ತು ನನಗೆ ಕೊಟ್ಟ ಪವರ್ ಆಫ್ ಆಟಾರ್ನಿಯನ್ನು ತೋರಿಸಿ ಅವರಿಗೆ ಪಿರ್ಯಾದನ್ನು ಕೊಟ್ಟಿರುತ್ತೇನೆ.

ಸಾಕ್ಷಿಯು ಪಿರ್ಯಾದಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಮೂಲ ಪಿರ್ಯಾದು ಸಿಸಿ ನಂ.277/2010 ರಲ್ಲಿ ಹಾಜರಪಡಿಸಿದ್ದು ಸದರಿ ಪ್ರಕರಣ ಇಂದೇ ನ್ಯಾ.ದಲ್ಲಿ ಸಾಕ್ಷ್ಯ ವಿಚಾರಣೆಗೆ ಇದ್ದುದರಿಂದ ಅದರಲ್ಲಿನ ಪಿರ್ಯಾದನ್ನು ನಿಪಿ-11 ಎಂದು ಗುರುತಿಸಲಾಗಿದ್ದು ಸದರಿ ಮೂಲ ಪಿರ್ಯಾದನ್ನು ನಕಲು ಪ್ರತಿಯ ಪಿರ್ಯಾದುನೊಂದಿಗೆ ತುಲನೆ ಮಾಡಿ ನಕಲು ಪಿರ್ಯಾದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಪಿಎಸ್ಐ ತಡಸ ಮತ್ತು ಅವರ ಸಿಬ್ಬಂದಿಯವರು ತಡಸ ಬಸ್ ನಿಲ್ದಾಣಕ್ಕೆ ಬಂದು ಸದರಿ ಮಾಲನ್ನು ಪರಿಶೀಲಿಸಿ ಅವು ನಕಲಿ ಎಂದು ಹೇಳಿದ್ದರಿಂದ ಪಿಎಸ್ಐ ತಡಸ ರವರು ಅಸಲಿಯೊಂದಿಗೆ ಹೇಗೆ ಪರಿಶೀಲನೆ ಮಾಡುತ್ತೀರಾ ಎಂದಿದ್ದರಿಂದ ನಮ್ಮ ಬಳಿ ಸ್ಯಾಂಪಲ್ ಇದ್ದ ಓರಿಜಿನಲ್ ಆಯೋಡೆಕ್ಸ್, ಝುಂಡುಬಾಂಬ್, ಮೆಂಥೊಪ್ಲೆಸ್, ಸರ್ಫ್ಎಕ್ಸೆಲ್, ಏರಿಯಲ್, ಟೈಡ್ ತೋರಿಸಿ ಅವುಗಳೊಂದಿಗೆ ಹೊಲಿಕೆ ಮಾಡಿ ನೋಡಿದಾಗ ಆ ವ್ಯಕ್ತಿಗಳ ಕೈಯಲ್ಲಿದ್ದ ಮಾಲು ನಕಲಿ ಎಂದು ಕಂಡುಬಂದಿದ್ದರಿಂದ ಅವರ ಕೈಯಲ್ಲಿದ್ದ ಮಾಲನ್ನು ಏಣಿಸಿಕೊಂಡು ಶೀಲು ಮಾಡಿ ಪಂಚನಾಮೆಯನ್ನು ಮಾಡಿ ಆ ವ್ಯಕ್ತಿಗಳನ್ನು ಠಾಣೆಗೆ ಕರೆದುಕೊಂಡು ಬಂದರು.

ಅಂದು ಪೋಲಿಸರು ಆ ವ್ಯಕ್ತಿಗಳಿಂದ ಜಪ್ತು ಮಾಡಿದ ನಕಲಿ ಮಾಲುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಅವುಗಳು ಇಗ ನ್ಯಾಯಾಲಯದ ಮುಂದೆ ಮೂಲ ಸಿಸಿ ನಂ.277/2010 ರಲ್ಲಿ ಹಾಜರಪಡಿಸಿದ್ದು ಸದರಿ ಪ್ರರಕಣ ಇಂದೇ ಸಾಕ್ಷ್ಯ ವಿಚಾರಣೆಗೆ ಇದ್ದುದರಿಂದ ಸ್ಟಿಟ್ಪ್ ಪ್ರಕರಣದಲ್ಲಿ ಅದೇ ಮಾಲಾಗಿದ್ದರಿಂದ ಅವುಗಳನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಎಂಒ-1 ರಿಂದ 6 ಎಂದು ಗುರುತಿಸಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಜೆ ಎಂ ಎಫ್ ಸಿ, ಶಿಗ್ಗಾಂವ